# ಮೈಸೂರು ವಿಶ್ವವಿದ್ಯಾನಿಲಯ

**Estd-1916**
**(Re-accredited by NAAC with CGPA 3.47 on four point scale with A grade)**

ಸಂಖ್ಯೆ: ಪ.ವಿ.8.1/ಪಿ.ಜಿ.ಬಿ/75/2009–10

ಕುಲಸಚಿವ (ಪರೀಕ್ಷಾಂಗ) ರವರ ಕಛೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ ಮೈಸೂರು–570 005,

ದಿನಾಂಕ: 01–04–2015

## ಅ ಧಿ ಸೂ ಚ ನೆ

ವಿಷಯ: ಮೇ–2015ರ ಮಾಹೆಯಲ್ಲಿ ನಡೆಯಲಿರುವ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್ ಎಂ.ಬಿ.ಎ ಸ್ನಾತಕೋತ್ತರ ಪದವಿ ಪರೀಕ್ಷೆಗೆ ಶುಲ್ಕ ಪಾವತಿ ಮಾಡುವ ಮತ್ತು ಅಭ್ಯರ್ಥನಾ ಪತ್ರ ಸಲ್ಲಿಸುವ ಬಗ್ಗೆ.

ಉಲ್ಲೇಖ: ವಿ.ವಿ.ಅಧಿಸೂಚನೆ ಸಂಖ್ಯೆ:ಎ.ಸಿ.7(ಎ)/108/2014–15, ದಿನಾಂಕ: 26.11.2014.

*****

ಮೇ – 2015ರ ಮಾಹೆಯಲ್ಲಿ ನಡೆಯಲಿರುವ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್ ಎಂ.ಬಿ.ಎ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಈ ಕೆಳಕಂಡ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

| | | |
|---|---|---|
| I ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | : | **13–05–2015** |
| II ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಪರೀಕ್ಷಾ ಅರ್ಜಿ ಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ | : | **15–04–2015** |
| III ವೇಳಾಪಟ್ಟಿ ಮತ್ತು ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | : | **18–04–2015** |
| IV ಪರೀಕ್ಷಾ ಅರ್ಜಿಗಳು, ಪ್ರವೇಶ ಪತ್ರಗಳು, ಅಭ್ಯರ್ಥನ ಪಟ್ಟಿಗಳನ್ನು ವಿ.ವಿ.ನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | : | **20–04–2015** |

**<u>ಪರೀಕ್ಷಾ ಶುಲ್ಕಗಳ ವಿವರಗಳು :</u>**

**I M.B.A. Course :**

| | | |
|---|---|---|
| **a)** | Whole Exam (Per Sem/Exam) | **₹1370.00** |
| **b)** | Per Paper with Practical | **₹545.00** |
| **c)** | Per paper without Practical | **₹350.00** |

**II Marks Card Fee (Per Year/Semester) ₹195.00**

ವಿ.ವಿ.ಆದೇಶ ಸಂಖ್ಯೆ:ಎಸಿ.2(ಎಸ್)/122/04–05, ದಿನಾಂಕ: 04–02–2005ರ ಪ್ರಕಾರ ಎಲ್ಲಾ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಪ್ರತ್ಯೇಕ–ಪ್ರತ್ಯೇಕವಾಗಿ ಪತ್ರಿಕೆಗಳ ಪರೀಕ್ಷೆ ತೆಗೆದುಕೊಂಡಲ್ಲಿ ಪಾವತಿಸಬೇಕಾದ ಗರಿಷ್ಠ ಪರೀಕ್ಷಾ ಶುಲ್ಕವು ಆಯಾಯ ವರ್ಷಕ್ಕೆ ವಿಷಯವಾರು ನಿಗದಿಗೊಳಿಸಲಾಗಿರುವ ಪೂರ್ಣ ಪರೀಕ್ಷಾ ಶುಲ್ಕಕ್ಕೆ (Whole examination fee) ಸಮಾನವಾಗಿರುತ್ತದೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

**<u>ಸೂಚನೆಗಳು:</u>**

1. ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಇಲ್ಲಿ ವಿಶ್ವವಿದ್ಯಾನಿಲಯ ಪರೀಕ್ಷಾ ಖಾತೆಗೆ ಜಮಾ ಆಗುವಂತೆ ಪಾವತಿಸಬೇಕು.

2. ಲಿಖಿತ ಪರೀಕ್ಷೆಗಳನ್ನು ಪ್ರಾರಂಭದ ದಿನಾಂಕದಿಂದ 10 ದಿನಗಳೊಳಗೆ ಮುಗಿಯುವಂತೆ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಇರುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ 10 ಪ್ರತಿಗಳನ್ನು ಅನುಮೋದನೆಗೆ ಕಳುಹಿಸುವುದು. ವೇಳಾಪಟ್ಟಿಯಲ್ಲಿ ಸರಿಯಾದ **Question Paper Code** ಮತ್ತು **Title** ಅನ್ನು ನಮೂದಿಸುವುದು.

3. ಮೌಖಿಕ ಪರೀಕ್ಷೆಗಳ ವೇಳಾಪಟ್ಟಿಗಳನ್ನು (ಲಿಖಿತ ಪರೀಕ್ಷೆಗಳ ನಂತರ ಇರುವಂತೆ ಸಿದ್ಧಪಡಿಸಿ) ಪರೀಕ್ಷಾ ಮಂಡಳಿ ಅಧ್ಯಕ್ಷರೊಡನೆ ಸಮಾಲೋಚಿಸಿ ಅನುಮೋದನೆಗೆ ಕಳುಹಿಸುವುದು. **<u>ಆಂತರಿಕ ಪರೀಕ್ಷಾ ಅಂಕಗಳನ್ನು (ಲಿಖಿತ ಪರೀಕ್ಷೆಗಳಿಗೆ ಮೊದಲು) ಸರಿಯಾದ ಕೋಡ್ ಸಂಖ್ಯೆಯೊಂದಿಗೆ ವಿಷಯವಾರು ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಕಳುಹಿಸುವುದು (ನಮೂನೆ ಲಗತ್ತಿಸಿದೆ). ಆಂತರಿಕ ಪರೀಕ್ಷಾ ಅಂಕಗಳು, ಲಿಖಿತ ಪರೀಕ್ಷೆ ಮುಗಿದ ನಂತರ ಸಲ್ಲಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಈ ತಪ್ಪಿಗೆ ವಿಭಾಗದ ಮುಖ್ಯಸ್ಥರೇ ನೇರ ಹೊಣೆಯಾಗಿರುತ್ತಾರೆ.</u>**

4. ಫಲಿತಾಂಶಗಳನ್ನು "ಮುಂದೆ ಪ್ರಕಟಿಸಲಾಗುವುದು" ("TAL"/Withheld) ಗುಂಪಿಗೆ ಒಳಪಟ್ಟಿರುವ ವಿದ್ಯಾರ್ಥಿಗಳು ಅವರ ಫಲಿತಾಂಶ ಪ್ರಕಟವಾದ ದಿನಾಂಕದಿಂದ ಏಳು ದಿವಸಗಳ ಒಳಗಾಗಿ ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಬಹುದು. **<u>ಆದರೆ ಇಂತಹ ವಿದ್ಯಾರ್ಥಿಗಳ ವಿವರಗಳನ್ನು ಕೂಡಲೇ ಈ ಕಛೇರಿಗೆ ಕಳುಹಿಸಿ ಫಲಿತಾಂಶವನ್ನು ಪಡೆದುಕೊಳ್ಳುವುದು.</u>**

5. ಅನುತ್ತೀರ್ಣ ವಿದ್ಯಾರ್ಥಿಗಳು ಮತ್ತು ಅಂಕಗಳ ಮರುಸಂಕಲನಕ್ಕಾಗಿ ಅರ್ಜಿ ಸಲ್ಲಿಸಿದ್ದ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಮೇಲೆ ಸೂಚಿಸಿದ ದಿನಾಂಕಗಳಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಬ್ಯಾಂಕ್ ಚಲನ್ ಮತ್ತು ಇತ್ತೀಚಿನ ಭಾವಚಿತ್ರದೊಂದಿಗೆ ಪರೀಕ್ಷಾ ಅರ್ಜಿಗಳನ್ನು ತಾವು ಅಧ್ಯಯನ ಮಾಡಿದ ಸಂಸ್ಥೆಗಳ ಮುಖಾಂತರ ಕಳುಹಿಸಬೇಕು.

6. ಅನುತ್ತೀರ್ಣ ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯ ಜೊತೆ ಮೌಖಿಕ ಇತ್ಯಾದಿ ಪರೀಕ್ಷೆಗಳನ್ನೂ ಸಹ ಸಂಬಂಧಿಸಿದ ಪಠ್ಯಕ್ರಮದಲ್ಲಿ ನಿಗದಿಯಾಗಿರುವಂತೆ ತೆಗೆದುಕೊಳ್ಳಬೇಕು.

7. ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾಗಲು ಅರ್ಹತೆಗೆ ಸಂಬಂಧಿಸಿದ ನಿಯಮಗಳ/ನಿಬಂಧನೆಗಳನ್ನು ಪೂರೈಸದ ವಿದ್ಯಾರ್ಥಿಗಳು ಕೇವಲ ಪರೀಕ್ಷಾ ಶುಲ್ಕ ಪಾವತಿ ಮಾಡಿ ಪರೀಕ್ಷೆಯ ಅಭ್ಯರ್ಥನ ಪತ್ರ ಸಲ್ಲಿಸಿದ ಮಾತ್ರಕ್ಕೆ ಅರ್ಹರಾಗುವುದಿಲ್ಲ.

8. ಸುತ್ತೋಲೆ ಸಂಖ್ಯೆ: ವಿಘ/1/9/2013-14, ದಿನಾಂಕ: 25-09-2013 ಪ್ರಕಾರ 2013-14ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ/ಡಿಪ್ಲೋಮ/ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದೆಂದು ಸರ್ಕಾರದ ಆದೇಶವಿರುತ್ತದೆ. ಇದರಂತೆ ಕ್ರಮತೆಗೆದುಕೊಳ್ಳುವುದು.

9. ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗದ ವಿದ್ಯಾರ್ಥಿಗಳು ಅವರ ಪೋಷಕರ ಆದಾಯ ರೂ.2.5 ಲಕ್ಷಗಳು ಮೀರಿದಲ್ಲಿ ಅವರುಗಳಿಂದ ಪೂರ್ಣ ಪರೀಕ್ಷಾ ಶುಲ್ಕ ಸಂಗ್ರಹಿಸುವುದು.

10. ಕ್ರ.ಸಂ.ಎ.ಸಿ.2/182/92–93, ದಿನಾಂಕ: 02–03–2000ರ ಕುಲಸಚಿವರ ಪತ್ರದಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಕ್ಯಾಟಗರಿ–1ರ ವರ್ಗದ ವಿದ್ಯಾರ್ಥಿಗಳು ಸದರಿ ಕೋರ್ಸನ್ನು ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕಗಳನ್ನು ತಪ್ಪದೆ ವಸೂಲು ಮಾಡಬೇಕೆಂದು ತಿಳಿಸಲಾಗಿದೆ.

11. ಒಮ್ಮೆ ಪಾವತಿ ಮಾಡಿದ ಪರೀಕ್ಷಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೇ ಆಗಲಿ ಮರುಪಾವತಿ ಮಾಡಲಾಗುವುದಿಲ್ಲ ಅಥವಾ ಮುಂದಿನ ಪರೀಕ್ಷೆಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

12. ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಪಡೆದಿರುವ ಬಗೆಗೆ ಮುಖ್ಯಸ್ಥರು ಅಭ್ಯರ್ಥನ ಪಟ್ಟಿಯಲ್ಲಿ ದೃಢೀಕರಿಸಬೇಕು.

13. ಸ್ನಾತಕೋತ್ತರ ಪದವಿ ಶೈಕ್ಷಣಿಕ ವರ್ಷದಲ್ಲಿ ನಿಬಂಧನೆಗಳಿಗನುಸಾರವಾಗಿ ಹಾಜರಾತಿ ಕೊರತೆ ಇರುವ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗುವುದಿಲ್ಲ.

14. ಪರೀಕ್ಷೆಯ ಒಂದು ಭಾಗವಾಗಿರುವ ಮಹಾನಿಬಂಧ/ಪ್ರೌಢ ಪ್ರಬಂಧ/ಪ್ರಾಜೆಕ್ಟ್ ಕಾರ್ಯ/ಕ್ಷೇತ್ರಕಾರ್ಯ ವರದಿ ಇತ್ಯಾದಿಗಳನ್ನು ನಿರ್ದಿಷ್ಟ ವಿಷಯದಲ್ಲಿನ ಲಿಖಿತ ಪರೀಕ್ಷೆಯ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಅಧ್ಯಯನ ವಿಭಾಗಗಳ ಸಂಬಂಧಪಟ್ಟ ಅಧ್ಯಕ್ಷರು/ಮುಖ್ಯಸ್ಥರಿಗೆ ದ್ವಿಪ್ರತಿಗಳಲ್ಲಿ ಸಲ್ಲಿಸಬೇಕು. ಪ್ರೌಢಪ್ರಬಂಧದಲ್ಲಿ ವಿದ್ಯಾರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

## <u>ಉತ್ತಮೀಕರಣ ಯೋಜನೆಯಡಿಯಲ್ಲಿ ಫಲಿತಾಂಶಗಳನ್ನು ಉತ್ತಮಪಡಿಸಿಕೊಳ್ಳಲು ಅವಕಾಶ:</u>

ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ಎಸಿ.2(ಎಸ್)/168/2006–07, ದಿನಾಂಕ: 13–02–2007ರ ರೀತ್ಯಾ ಮೇ/ಜೂನ್ 2012 ರ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ತಮ್ಮ ಫಲಿತಾಂಶಗಳನ್ನು ಉತ್ತಮಪಡಿಸಿಕೊಳ್ಳುವ ವಿದ್ಯಾರ್ಥಿಗಳು ಸದರಿ ಪರೀಕ್ಷೆಯ ಪರೀಕ್ಷಾ ಶುಲ್ಕ ಪಾವತಿಗೆ ನಿಗದಿಪಡಿಸಿದ ದಿನದೊಳಗೆ ನಿಗದಿತ ಅರ್ಜಿಯಲ್ಲಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಪರೀಕ್ಷಾ ಅರ್ಜಿಯೊಂದಿಗೆ ವಿಶ್ವವಿದ್ಯಾನಿಲಯದ ಅನುಮತಿ ಪತ್ರ ಮತ್ತು ಉತ್ತಮೀಕರಣ ಶುಲ್ಕ **(ಪ್ರತಿ ಪೇಪರ್‌ಗೆ ರೂ.475.00)**ವನ್ನು ಪಾವತಿಸಿ ರಶೀತಿಯನ್ನು ಲಗತ್ತಿಸಬೇಕು. ಯಾವ ಉತ್ತಮೀಕರಣ ಪರೀಕ್ಷೆಗೆ ಹಾಜರಾಗಬೇಕಾಗಿದಿಯೋ ಅಂತಹ ಪರೀಕ್ಷೆಗಳಿಗೆ ಹಾಜರಾದ ಹಿಂದಿನ ಎಲ್ಲಾ ಪರೀಕ್ಷೆಗಳ ಮೂಲ ಅಂಕಪಟ್ಟಿಗಳನ್ನು ಲಗತ್ತಿಸಬೇಕು ಹಾಗೂ ಇಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಪ್ರತ್ಯೇಕ ಪಟ್ಟಿಯಲ್ಲಿ ಕಳುಹಿಸುವುದು. ಇವುಗಳಲ್ಲಿ ವ್ಯತ್ಯಾಸವಾದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ಲಿಖಿತ ಅನುಮತಿ ಇಲ್ಲದೆ ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ ವಿಶ್ವವಿದ್ಯಾನಿಲಯವು ಯಾವುದೇ ಕಾರಣಕ್ಕೂ ಹೊಣೆಯಾಗುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿದೆ.

## <u>ವಿಶೇಷ ಸೂಚನೆ:</u>

1. ಪಠ್ಯಕ್ರಮದಲ್ಲಿ ಅಥವಾ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ರೀತಿಯ ಬದಲಾವಣೆಯಿದ್ದಲ್ಲಿ ಸದರಿ ವಿಭಾಗದ ಅಧ್ಯಕ್ಷರು ಬದಲಾವಣೆಯ ವಿವರಗಳೊಂದಿಗೆ ಕಂಪ್ಯೂಟರ್ ವಿಭಾಗದ ಮುಖ್ಯಸ್ಥರನ್ನು ಭೇಟಿಯಾಗಬೇಕೆಂದು ಕೋರಲಾಗಿದೆ.
2. ಪರೀಕ್ಷೆಗಳಿಗೆ **Bar Coded/OMR** ಉತ್ತರ ಪತ್ರಿಕೆಗಳನ್ನು ಉಪಯೋಗಿಸಬೇಕು. ಇದಕ್ಕೆ ಪೂರಕವಾಗಿ ಪ್ರತಿ ವಿದ್ಯಾರ್ಥಿಗೆ **Student ID** ಯನ್ನು ಹಾಗೂ ಪ್ರತಿ ಪ್ರಶ್ನೆ ಪತ್ರಿಕೆಗೆ **Question Paper Code** ಅನ್ನು ನೀಡಲಾಗಿದೆ. **Student ID** ಮತ್ತು **Question Paper Code** ಗಳ ಮಾಹಿತಿ ಬೇಕಾದಲ್ಲಿ ಪರೀಕ್ಷಾ ವಿಭಾಗದ ಗಣಕ ಕೇಂದ್ರದಿಂದ ಪಡೆಯಬೇಕು.
3. ಪರೀಕ್ಷಾ ಅರ್ಜಿಯ ಖಾಲಿ ಫಾರಂಗಳನ್ನು ನೀಡಲಾಗುವುದು. ಈ ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿ ಅವರಿಂದ ಮಾಹಿತಿ ಪಡೆದು **Online** ಮೂಲಕ ಸಲ್ಲಿಸಬೇಕು. **Online**ನಲ್ಲಿ ಪ್ರವೇಶ ಪತ್ರ ಪಡೆದು ಅಭ್ಯರ್ಥನಾ ಪಟ್ಟಿಯ ಜೊತೆಯಲ್ಲಿ ಪ್ರವೇಶ ಪತ್ರ ಅನುಮೋದನೆಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು.
4. ಉತ್ತಮೀಕರಣ ಪರೀಕ್ಷೆಯನ್ನು ತೆಗೆದುಕೊಳ್ಳುವವರು ಖಾಲಿ ಅರ್ಜಿ ಫಾರಂನಲ್ಲಿ ಮಾಹಿತಿಯನ್ನು ನೀಡಬೇಕು ಮತ್ತು ಪ್ರತ್ಯೇಕವಾಗಿ ಅಭ್ಯರ್ಥನಾ ಪಟ್ಟಿಯನ್ನು ತಯಾರಿಸಬೇಕು.

5. ಸಂಬಂಧಪಟ್ಟ ಕಾಲೇಜು/ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರುಗಳು ದಿನಂಪ್ರತಿ ಪರೀಕ್ಷೆ ಮುಗಿದ ಆ ದಿನವೇ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಸೀಲ್ ಮಾಡಿ ಅಂಚೆ ಮೂಲಕ ಅಥವಾ ಖುದ್ದಾಗಿ ಕುಲಸಚಿವ(ಪರೀಕ್ಷಾಂಗ) ರವರ ವಿಭಾಗಕ್ಕೆ ಕಳುಹಿಸಲು ಕ್ರಮಕೈಗೊಳ್ಳುವುದು.

## <u>ಪರೀಕ್ಷಾ ಕೇಂದ್ರಗಳು ಮತ್ತು ಪರೀಕ್ಷಾ ಮುಖ್ಯ ಮೇಲ್ವಿಚಾರಕರ</u>

ಈ ಮುಂದೆ ನಮೂದಿಸಿರುವಂತೆ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸಲಾಗಿದೆ ಹಾಗೂ ಸಂಬಂಧಪಟ್ಟ ಮುಖ್ಯಸ್ಥರನ್ನು ಪರೀಕ್ಷಾ ಮುಖ್ಯ ಮೇಲ್ವಿಚಾರಕರಾಗಿ ನೇಮಿಸಲಾಗಿದೆ. ಪರೀಕ್ಷೆಗಳು ಸುಗಮವಾಗಿ ನಡೆಯಲು ಮುಖ್ಯ ಮೇಲ್ವಿಚಾರಕರು "Manual for conduct of examination" ಪ್ರಕಾರ ಕ್ರಮ ತೆಗೆದುಕೊಳ್ಳುವುದು.

1. ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್, ಮಾನಸಗಂಗೋತ್ರಿ, ಮೈಸೂರು.
2. ಪೂಜ ಭಗವತ್ ಮೆಮೊರಿಯಲ್ ಮಹಾಜನ ಶಿಕ್ಷಣ ಕೇಂದ್ರ, ಮೇಟಗಳ್ಳಿ, ಕೆ.ಆರ್.ಎಸ್. ರಸ್ತೆ, ಮೈಸೂರು.
3. ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ವ್ಯವಹಾರ ವಿಜ್ಞಾನ ಕಾಲೇಜು, ಮೈಸೂರು.
4. ಸ್ಯಾಟಲೈಟ್ ಪಿ.ಜಿ. ಸೆಂಟರ್, ಚಾಮರಾಜನಗರ.

**ಈ ಕೆಳಕಂಡ ಕಾಲೇಜಿನ ವಿದ್ಯಾರ್ಥಿಗಳು ಮುಂದೆ ನಮೂದಿಸಿರುವ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಸೂಚಿಸಲಾಗಿದೆ.**

| ಕ್ರ. ಸಂ. | ಕಾಲೇಜಿನ ಹೆಸರು | ಕೋರ್ಸ್ | ಪರೀಕ್ಷಾ ಕೇಂದ್ರ |
|---|---|---|---|
| 1 | ಹೆಚ್.ಆರ್. ಉನ್ನತ ಶಿಕ್ಷಣ ಸಂಸ್ಥೆ, ಹಾಸನ | ಎಂ.ಬಿ.ಎ. | ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ. |

**ಸೂಚನೆ:**

**ಹೆಚ್.ಆರ್. ಉನ್ನತ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು,** ಸಂಬಂಧಪಟ್ಟ ಪರೀಕ್ಷಾ ಮುಖ್ಯ ಮೇಲ್ವಿಚಾರಕರಿಗೆ ಪರೀಕ್ಷಾ ಸಂಬಂಧ ಎಲ್ಲಾ ದಾಖಲೆಗಳನ್ನು ಸಾಕಷ್ಟು ಮುಂಚಿತವಾಗಿ ಕಳುಹಿಸಿಕೊಡುವುದು ಹಾಗೂ ಮೇಲ್ಕಂಡ ಪರೀಕ್ಷಾ ಕೇಂದ್ರದ ಮುಖ್ಯ ಮೇಲ್ವಿಚಾರಕರು ತಮ್ಮ ಕೇಂದ್ರಕ್ಕೆ ವರ್ಗಾಯಿಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವುದು.

***ಕುಲಸಚಿವ***

***(ಪರೀಕ್ಷಾಂಗ)***

ಇವರಿಗೆ:

1. ನಿರ್ದೇಶಕರು, ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್, ಮಾನಸಗಂಗೋತ್ರಿ, ಮೈಸೂರು
2. ನಿರ್ದೇಶಕರು/ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರ, ಮಂಡ್ಯ ಮತ್ತು ಹಾಸನ.
3. ಮುಖ್ಯಸ್ಥರು, ವಿಶ್ವವಿದ್ಯಾನಿಲಯದ ಸ್ಯಾಟಲೇಟ್ ಕೇಂದ್ರ, ಚಾಮರಾಜನಗರ.

(1–3) ಅವಗಾಹನೆ ಮತ್ತು ಸೂಕ್ತ ಕ್ರಮಕ್ಕಾಗಿ

4. ಸಂಬಂಧಪಟ್ಟ ಎಲ್ಲಾ ಕಾಲೇಜುಗಳ/ಸಂಸ್ಥೆಗಳ ಪ್ರಾಂಶುಪಾಲರು/ಮುಖ್ಯಸ್ಥರು.
5. ಕುಲಸಚಿವ (ಪರೀಕ್ಷಾಂಗ), ಬೆಂಗಳೂರು/ಕರ್ನಾಟಕ/ಧಾರವಾಡ/ಕುವೆಂಪು/ಶಿವಮೊಗ್ಗ/ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು/ಮಂಗಳೂರು/ಗುಲ್ಬರ್ಗ/ತುಮಕೂರು ವಿಶ್ವವಿದ್ಯಾನಿಲಯ.
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು.
9. ಉಪನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಎಚ್.ಸಿ.ದಾಸಪ್ಪ ವೃತ್ತ, ಮೈಸೂರು– ಈ ಪ್ರಕಟಣೆಯನ್ನು ಉಚಿತವಾಗಿ ಪ್ರಮುಖ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿಸಲು ಕೋರಿದೆ.
10. ಸಹಾಯಕ ನಿರ್ದೇಶಕರು, ಆಕಾಶವಾಣಿ, ಮೈಸೂರು– ಈ ಪ್ರಕಟಣೆಯನ್ನು ಸ್ಥೂಲವಾಗಿ ವಾರ್ತೆಯಲ್ಲಿ ಉಚಿತವಾಗಿ ಬಿತ್ತರಿಸಲು ಕೋರಿದೆ.
11. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಎಲ್ಲಾ ಉಪ/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಶ್ರೀ ರಾಜುಪಟೇಲ್ ಆರ್, ದ್ವಿದ.ಗು, ಗಣಕ ವಿಭಾಗ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
14. ಮುಖ್ಯಸ್ಥರು, ಐ.ಇ.ಎಂ ಕ್ಯಾಂಪ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಮಾನ್ಯ ಕುಲಪತಿ/ಕುಲಸಚಿವ/ ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
17. ಕಾರ್ಯನಿರ್ವಾಹಕರು, ಔಟ್‌ರೀಚ್ ಸೆಂಟರ್, ಪ.ವಿ.8.2/8.3/8.5/8.9 ಮತ್ತು ಪ.ವಿ.1.7, ಪರೀಕ್ಷಾ ವಿಭಾಗ, ಮೈಸೂರು ವಿ.ವಿ, ಮೈಸೂರು– ಸೂಕ್ತ ಕ್ರಮಕ್ಕಾಗಿ.
18. ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯ ವೆಬ್‌ಸೈಟ್‌ನಲ್ಲಿ Upload ಮಾಡಲು ಕೋರಿದೆ.
19. ಕಛೇರಿ ಪ್ರತಿ.

## UNIVERSITY OF MYSORE

## POST-GRADUATE EXAMINATION OF MAY-2015

## QUESTION PAPER INDENT

**Centre :______________________**

**Semester :______________________**

**Subject/ Degree:______________ TIME:________________**

| Day and Date | Question Paper Code No. | Title of the Paper | No. of Copies |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

**Signature of theChairperson**
**with Seal**

**UNIVERSITY OF MYSORE**

**POST-GRADUATE EXAMINATION OF MAY-2015**

**TIME-TABLE**

**Centre : _________________**

**Semester : ___________________**

**Subject/ Degree:__________** **TIME:______________**

| Day and Date | Question Paper Code No. | Title of the Paper |
|---|---|---|
| | | |
| | | |
| | | |
| | | |
| | | |
| | | |
| | | |

**Note:**

1. The candidate are requested to follow the instruction printed on the Answer Book and Admission ticket.

**Signature of the Chairperson**
**with Seal**

**Registrar (Evaluation)**

# UNIVERSITY OF MYSORE

INTERNAL ASSESMENT MARKS FORMAT – MAY-2015
EXAMINATION.

**Department:** **Code No.of the Subject/Paper:**

**Title of Subject/Paper :**

**Examination:** **Semster/Year** **Maximum Marks**

| SL.No | Name (in block letters) | Reg.No | Marks |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

**Signature of the Chairperson**
**with Seal**

**Note:**

I.A Marks shall be furnished for each paper separately. Wherever, I.A marks are awarded by more than one examiner, a consolidated marks list( Paper-wise) shall also be furnished in addition to the original marks lists.